**DW-1**

**ದಿನಾಂಕಃ 03-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ.ಪಿ.ಆರ್.ಕೆ ವಕೀಲರಿಂದಃ**

ನನ್ನ ಸ್ವಂತ ಊರು ಹರಪನಹಳ್ಳಿ ತಾಲ್ಲೂಕು ಕೆಂಚಾಪುರ ಆಗಿರುತ್ತದೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಕೃಷಿ ಜಮೀನು ಇರುತ್ತದೆ. ಅದಕ್ಕೆ ಯಾವುದೇ ನೀರಾವರಿ ಮೂಲ ಇರುವುದಿಲ್ಲ. ನಾನು ಜಮೀನಿನಲ್ಲಿ ಮೆಕ್ಕೆಜೊಳ ಬೆಳೆಯುತ್ತೇನೆ. ಬೇರೆಯವರ ಜಮೀನಿನಿಂದ ನೀರು ಪಡೆದು ಬೀಜಗಳನ್ನು ಬೆಳೆದು ಕೊಡುತ್ತೇನೆ. ವೆ ಣಸಿನಕಾಯಿ, ಟಮೋಟೋ, ಬದನೆ ಮತ್ತು ಕ್ಯಾಪ್ಸಿಕಂ ಬೀಜಗಳನ್ನು ಬೆಳೆದು ಕೊಡುತ್ತೇನೆ. ಬೀಜದ ಕಂಪನಿಯವರು ಬೀಜ ಬೆಳೆದು ಕೊಡಲು ಹೆಣ್ಣು-ಗಂಡು ಮೂಲ ಬೀಜಗಳನ್ನು ಕೊಡುತ್ತಾರೆ. ದೂರುದಾರರು ಸಹ ನವೀನ್ ಆಗ್ರೋ ಎಂಬ ಬೀಜದ ಕಂಪನಿ ನಡೆಸುತ್ತಾರೆ ಎಂದರೆ ಸರಿ. ನಾನು ಅವರ ಕಂಪನಿಗೆ ಬಹಳ ದಿನಗಳಿಂದ ಬೀಜಗಳನ್ನು ಬೆಳೆದು ಕೊಡುತ್ತೇನೆ ಎಂದರೆ ಸರಿ. ಈ ರೀತಿಯ ಬೀಜ ಬೆಳೆಯುವ ಅವಶ್ಯಕತೆಗಾಗಿ ದೂರುದಾರರಿಂದ ಹಣ ಪಡೆದು ವಾಪಸ್ಸು ಕೊಡುತ್ತಿದ್ದೆ ಎಂದರೆ ಸಾಕ್ಷಿ ಬೀಜ ಬೆಳೆಯುವ ಖರ್ಚಿಗಾಗಿ ಹಣ ಪಡೆಯುತ್ತಿದ್ದೆ ಎಂದು ಹೇಳುತ್ತಾರೆ. ಆ ರೀತಿ ಪಡೆದ ಹಣಕ್ಕೆ ಬೀಜ ಬೆಳೆದು ಕೊಟ್ಟು ಅದನ್ನು ಜಮಾ ಮಾಡುತ್ತಿದ್ದೆ.

ಅದೇ ರೀತಿ ನಾನು ದೂರುದಾರರಿಂದ RTGS ಮೂಲಕ Rs.13,18,000/- ಹಣ ಪಡೆದಿರುತ್ತೇನೆ ಎಂದರೆ ಸರಿ. ಆ ಬಾಬ್ತು ಒಂದು ಲಕ್ಷ ರೂಪಾಯಿಗಳನ್ನು ಅಕೌಂಟ್ ಮೂಲಕ ದೂರುದಾರರಿಗೆ ವಾಪಸ್ಸು ಕೊಟ್ಟಿರುತ್ತೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ಉಳಿದ ಹಣ ಬಾಬ್ತು ನಾನು ಬೀಜ ಬೆಳೆದು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ತೇಜಸ್ವಿನಿ ಎಂಬ ಮೆಣಸಿನಬೀಜ 1 ಕ್ವಿಂಟಾಲ್ 60 ಕೆ.ಜಿ., 273 ಎಂಬ ಮೆಣಸಿನಬೀಜ 30 ಕೆ.ಜಿ., ಸನ್-ಗ್ರೋ ಎಂಬ ಮೆಣಸಿನಬೀಜ 110 ಕೆ.ಜಿ.ಯನ್ನು ಬೆಳೆದು ದೂರುದಾರರಿಗೆ ಕೊಟ್ಟಿರುತ್ತೇನೆ. ತೇಜಸ್ವಿನಿ ಮೆಣಸಿನಬೀಜ 1 ಕೆ.ಜಿ. ಗೆ ಈಗ ಹತ್ತು ಸಾವಿರ ರೂಪಾಯಿ ದರ ಇರುತ್ತದೆ. 273 ಎಂಬ ಮೆಣಸಿನಬೀಜ 1 ಕೆ.ಜಿ. ಗೆ ಈಗ ಎಂಟು ಸಾವಿರ ರೂಪಾಯಿ ದರ ಇರುತ್ತದೆ. ಸನ್-ಗ್ರೋ ಎಂಬ ಮೆಣಸಿನಬೀಜ 1 ಕೆ.ಜಿ. ಗೆ ಈಗ

ಹನ್ನೊಂದು ಸಾವಿರ ರೂಪಾಯಿ ದರ ಇರುತ್ತದೆ. ಆ ಬೀಜಗಳನ್ನು ಬೆಳೆದು ದೂರುದಾರರ ಕಂಪನಿಗೆ ಕೊಟ್ಟಿರುತ್ತೇನೆ ಎಂದು ತೋರಿಸಲು ದಾಖಲೆ ಇದಿಯೇ ಎಂದರೆ ಸಾಕ್ಷಿಯು ಚೀಟಿ ಮತ್ತು ಸ್ಯಾಂಪಲ್ ಬೀಜ ಮಾತ್ರ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಾವು ಕೊಟ್ಟ ಬೀಜವನ್ನು ಬೀಜ ಪರೀಕ್ಷಕರಿಗೆ ಕಳುಹಿಸುತ್ತಾರೆ ಎಂದರೆ ಸರಿ. ಬೀಜ ಬೆಳೆದು ದಿಃ 13-01-2019 ರಂದು ದೂರುದಾರರಿಗೆ ಕೊಟ್ಟಿರುತ್ತೇನೆ. ಮೇಲೆ ಹೇಳಿದ ಮೂರೂ ಬೀಜಗಳನ್ನು ದಿಃ 13-01-2019 ರಂದು ದೂರುದಾರರಿಗೆ ಕೊಟ್ಟಿರುತ್ತೇನೆ. ಮೂರೂ ಬೀಜಗಳನ್ನು ಕಂಪನಿಯವರು ಜೂನ್ ತಿಂಗಳಲ್ಲಿ ಕೊಟ್ಟಿರುತ್ತಾರೆ ಆದರೆ ದಿನಾಂಕವನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ನಾವು ಎಷ್ಟು ಬೀಜ ಮತ್ತು ಸಸಿ ತೆಗೆದು ಕೊಂಡು ಹೋಗಿದ್ದೇವೆ ಎನ್ನುವ ಬಗ್ಗೆ ನಮಗೂ ಸಹ ದಾಖಲೆ ಕೊಡುತ್ತಾರೆ ಎಂದರೆ ಸಾಕ್ಷಿ ನಮಗೆ ಯಾವುದೇ ದಾಖಲೆ ಕೊಡುವುದಿಲ್ಲ ಎಂದು ಹೇಳುತ್ತಾರೆ .

ಬೀಜಗಳನ್ನು ಬಿತ್ತನೆ ಮಾಡಲು ಮತ್ತು ಔಷಧಿ ಸಿಂಪಡಿಸಲು ಮತ್ತು ಕ್ರಾಸಿಂಗ್ ಮಾಡಲು ಮತ್ತು ಕಟಾವು ಮಾಡಲು ನಿರ್ದಿಷ್ಟ ನಿಗದಿತ ಸಮಯದಲ್ಲೇ ಮಾಡಬೇಕು ಎಂದರೆ ಸರಿ. ನಿಗದಿತ ಸಮಯದಲ್ಲಿ ಮಾಡದೇ ಇದ್ದರೆ ಬೀಜಗಳು ಬರುವುದಿಲ್ಲ ಎಂದರೆ ಸರಿ. ನಮ್ಮ ಊರಿನಲ್ಲಿ 20 ಜನ ರೈತರು ಬೀಜಗಳನ್ನು ದೂರುದಾರರ ಕಂಪನಿಯಿಂದ ಪಡೆದಿದ್ದರು. 2018-19 ನೇ ಸಾಲಿನಲ್ಲಿ ದೂರುದಾರರ ಕಂಪನಿಯಿಂದ ಯಾವುದೇ ಬೀಜವನ್ನು ಬೆಳೆಯಲು ತೆಗೆದು ಕೊಂಡು ಹೋಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ದೇವರಗುಡ್ಡದಲ್ಲಿ ದೂರುದಾರರು ನಮಗೆ ಸಸಿಯನ್ನು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. 2018-19 ನೇ ಸಾಲಿನಲ್ಲಿ ನಾನು ಯಾವುದೇ ಬೀಜವನ್ನು ಬೆಳೆದಿಲ್ಲ ಮತ್ತು ನಾನು ಹೇಳಿದಂತೆ 2019 ರಲ್ಲಿ ಯಾವುದೇ ಬೀಜವನ್ನು ದೂರುದಾರರ ಕಂಪನಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದೂರುದಾರರು Rs.14,18,600/- ಗಳನ್ನು RTGS ಮೂಲಕ 2017 ರಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿ ಸಾಕ್ಷಿ ಬೀಜ ಬೆಳೆಯುವುದಕ್ಕಾಗಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ದಿಃ 13-01-2019 ರಂದು ಬೀಜ ಬೆಳೆದು ಕೊಟ್ಟು ಲೆಕ್ಕಚಾರ ಮಾಡಿ ಎಲ್ಲಾ ಹಣವನ್ನು ಜಮಾ ಹಾಕಿ ಉಳಿದ ಒಂದು ಲಕ್ಷ ರೂಪಾಯಿಗಳನ್ನು ಬ್ಯಾಂಕ್ ಮೂಲಕ ದೂರುದಾರರಿಗೆ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದೂರುದಾರರು ಯಾವುದೇ ಹಣ ಕೊಡುವ ವ್ಯವಹಾರವನ್ನು ಬ್ಯಾಂಕ್ ಮೂಲಕವೇ ಮಾಡುತ್ತಾರೆ ಎಂದರೆ ಸರಿ. ಅವರು ಬೇರೆಯವರಿಂದ ಹಣ ಪಡೆಯುವುದು ಇದ್ದರೆ ಅದನ್ನು ಬ್ಯಾಂಕ್ ಮೂಲಕವೇ ಪಡೆಯುತ್ತಾರೆ ಎಂದರೆ ಸರಿ. ನಾನು ಹಣ ಮರುಪಾವತಿ ಮಾಡಿದ್ದರೆ ಅಥವಾ ಬೀಜ ಬೆಳೆದು ಕೊಟ್ಟಿದ್ದರೆ ದೂರುದಾರರು ನಮಗೆ ದಾಖಲೆ ಕೊಡುತ್ತಿದ್ದರು ನಾನು ಯಾವುದೇ ಬೀಜ ಬೆಳೆದು ಕೊಟ್ಟಿಲ್ಲ ಆದ ಕಾರಣ ನನ್ನ ಬಳಿ ದಾಖಲೆ ಇಲ್ಲ ಎಂದರೆ ಸರಿಯಲ್ಲ. ದೂರುದಾರರಿಗೆ ಕೊಡಬೇಕಾದ ಹಣದ ಮರುಪಾವತಿಗಾಗಿ ಚೆಕ್ ನ್ನು ಕೊಟ್ಟು ನಂತರ ಬ್ಯಾಂಕ್ ಗೆ ಸ್ಟಾಪ್ ಪೇಮೆಂಟ್ ಇಂಟಿಮೇಶನ್ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ದೂರುದಾರರು ಚೆಕ್ ವಾಪಸ್ಸು ಕೊಡದೇ ಇದ್ದಾಗ ನಾನು ಬ್ಯಾಂಕ್ ಗೆ ಸ್ಟಾಪ್ ಪೇಮೆಂಟ್ ಇಂಟಿಮೇಶನ್ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಒಂದು ಲಕ್ಷ ಹಣವನ್ನು ಬಿಟ್ಟು ಬೇರೆ ಹಣವನ್ನು ನಾನು ದೂರುದಾರರಿಗೆ ಬ್ಯಾಂಕ್ ಮೂಲಕ ಕೊಟ್ಟಿರುವುದಿಲ್ಲ.

ದೂರುದಾರರು ಕೊಟ್ಟ ನೋಟಿಸ್ ಗೆ ನಾನು ಉತ್ತರ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ನನ್ನ ರಿಪ್ಲೈ ನೋಟಿಸ್ ನಲ್ಲಿ ದಿಃ 13-01-2019 ರಂದು ಬೀಜ ಬೆಳೆದು ಕೊಟ್ಟು ಉಳಿದ ಒಂದು ಲಕ್ಷವನ್ನು ಬ್ಯಾಂಕ್ ಮೂಲಕ ಕೊಟ್ಟಿರುತ್ತೇನೆ ಎಂದು ನಮೂದು ಮಾಡಿರುತ್ತೇನೆ. ಆ ರೀತಿ ನನ್ನ ರಿಪ್ಲೈ ನೋಟಿಸ್ ನಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಮತ್ತು ನೋಟಿಸ್ ನಲ್ಲಿ ದೂರುದಾರರು ನಾನು ಒಂದು ಲಕ್ಷ ಕೊಟ್ಟ ವಿಚಾರವನ್ನು ತಿಳಿಸಿರುತ್ತಾರೆ ಎಂದರೆ ಸರಿ. ಒಂದು ಲಕ್ಷ ಹಣವನ್ನು ದೂರುದಾರರಿಗೆ ದಿಃ 17-09-2017 ರಂದು ಕೊಟ್ಟಿರುತ್ತೇನೆ. ಒಂದು ಲಕ್ಷ ಹಣವನ್ನು ನಾನು ದಿಃ 16-08-2017 ರಂದು ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. 2016 ನೇ ಇಸವಿಯಲ್ಲಿ ದೂರುದಾರರು 5 ಕ್ವಿಂಟಾಲ್ ಬೀಜ ಬೆಳೆದು ಕೊಡಿ ಎಂದು ಹೇಳಿದ್ದರು. ಬೀಜ ಬೆಳೆಯಲು ಖರ್ಚಿಗೆ ಹಣ ಕೊಡುತ್ತೇವೆ ಎಂದು ಹೇಳಿದ್ದರು. ನಮ್ಮ ಊರಿನಲ್ಲಿ ನಾಲ್ಕು ಹೊಲಗಳಲ್ಲಿ ಬೀಜ ಹಾಕಿಸಿದ್ದೆ ಅವರ ಹೆಸರು ಬಿ.ಹನುಮಂತಪ್ಪ , ಹಾಲಪ್ಪ , ವಸಂತ , ಬಿ.ಅಂಜನಪ್ಪ ಮತ್ತು ಹುಚ್ಚಂಗಿದುರ್ಗದಲ್ಲಿ ಬಿ.ಬಸವರಾಜಪ್ಪ, ಟಿ.ಹನುಮಂತಪ್ಪ ಹಾಗೂ ಎಳವಳ್ಳಿ ಗ್ರಾಮದಲ್ಲಿ ಗಣೇಶ, ಶ್ರೀಪತಿ, ಬಸವರಾಜ, ಚನ್ನಬಸಪ್ಪ , ಕೋಟೇಶ ಇನ್ನು

ಮುಂತಾದವರಿಗೆ ಬೀಜ ಕೊಡಿಸಿದ್ದೇನು.

ದೂರುದಾರರಿಗೆ ಬೀಜ ಕೊಟ್ಟ ಬಗ್ಗೆ ಚೀಟಿ ಮತ್ತು ಸ್ಯಾಂಪಲ್ ಕೊಟ್ಟ ಬಗ್ಗೆ ದಾಖಲೆ ನನ್ನ ಬಳಿ ಇರುತ್ತದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದೂರುದಾರರ ಕಂಪನಿಂದ ಸಸಿ ಪಡೆದ ಬಗ್ಗೆ ದಾಖಲೆ ಇರುವುದಿಲ್ಲ. ದೂರುದಾರರು ಹಾಜರು ಪಡಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದೂರುದಾರರು ನಗದಾಗಿ ರೂ. 20,000/- ಕೊಟ್ಟಿದ್ದರು. ಉಳಿದ ಹಣವನ್ನು ಚೆಕ್ ಮತ್ತು ಆರ್.ಟಿ.ಜಿ.ಎಸ್ ಮೂಲಕ ದೂರುದಾರರು ಕೊಟ್ಟಿರುತ್ತಾರೆ ಎಂದರೆ ಸರಿ. ದೂರುದಾರರು ಕಳುಹಿಸಿದ ನೋಟೀಸು ನನಗೆ ಜಾರಿಯಾಗಿರುತ್ತದೆ ಎಂದರೆ ಸರಿ. ನೋಟೀಸು ಜಾರಿಯಾದ ಒಂದು ತಿಂಗಳು ನಂತರ ದಿನಾಂಕಃ 05-07-2019 ರಂದು ಈ ಕೇಸು ಹಾಕಿರುತ್ತಾರೆ ಎಂದರೆ ಸರಿ. ಈ ಕೇಸು ದಾಖಾಲದ ನಂತರ ನಾನು ವಕೀಲರ ಮೂಲಕ ಆ ನೋಟೀಸಿಗೆ ಉತ್ತರ ಕೊಡಿಸಿರುತ್ತೇನೆ ಎಂದರೆ ಸರಿ. ನಾನು ದೂರುದಾರರಿಗೆ ಯಾವುದೇ ಬೀಜ ಕೊಡದೆ ಇದ್ದರೂ ಸಹ ಬೀಜ ಕೊಟ್ಟಿರುತ್ತೇನೆ ಎಂದು ಹೇಳಿ ಸುಳ್ಳು ಉತ್ತರ ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಉತ್ತರಕ್ಕೆ ಯಾವುದೇ ಆಧಾರಗಳು ಇಲ್ಲ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ಬೀಜ ಕೊಟ್ಟು ಅವರಿಗೆ ಕೊಡಬೇಕಾದ ಎಲ್ಲ ಹಣ ಚುಕ್ತ ಮಾಡಿದಿದ್ದರೂ ಸಹ ಅವರು ನನ್ನ ಚೆಕ್ ಮರಳಿ ಕೊಟ್ಟಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಂದ ಹಣ ಪಡೆದು ಅದರ ಮರುಪಾವತಿಯಾಗಿ ನಿಪಿ-1 ರಂತೆ ಚೆಕ್ ನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ಚೆಕ್ ಅಮಾನ್ಯಗೊಂಡ ನಂತರ ಅವರು ನೋಟೀಸು ಕೊಟ್ಟರು ಸಹ ಹಣಕೊಡದೆ ಇದ್ದಾಗ ನನ್ನ ವಿರುದ್ದ ಈ ಕೇಸು ಹಾಕಿರುತ್ತಾರೆ ಎಂದರೆ ಸಾಕ್ಷಿ ನಾನು ಅವರಿಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದು ಹೇಳುತ್ತಾರೆ. ನಾನು ದೂರುದಾರರಿಗೆ ಹಣ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದೂರುದಾರರಿಗೆ ನಿಪಿ-1 ರ ಚೆಕ್ಕಿನ ಹಣ ಮತ್ತು ಖರ್ಚು ಕೊಡಲು ಬಾದ್ಯನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.